ಅಸಮಾಧಾನದ ಎಳೆಯನ್ನು ಬಿಟ್ಟುಕೊಟ್ಟಿತ್ತೇನೋ. 'ಏನಾಗಿದೆ ಇದಕ್ಕೆ?' ಅನ್ನುತ್ತಾ ಅವನ ಕಣ್ಣನ್ನೇ ಅನುಸರಿಸಿ ಕೆಳಗೆ ನೋಡಿಕೊಂಡವಳಿಗೆ ಸ್ವಲ್ಪ ಜಾಸ್ತಿಯಿದ್ದ ಎಕ್ಸ್‌ಪೋಸರ್ ಬಗ್ಗೆ ಇರಬಹುದು ಅನಿಸಿತು. ಆಫೀಸಿಗಾಗಲೆ ತಡವಾಗಿದ್ದು ಕರಕರೆಯಾಗಿ 'ಇದು ನೀನೇ ಆರಿಸಿದ್ದು ತಾನೇ?... ನಿನಗಾಗಿ ಹಾಕ್ಕೊಂಡಿದ್ದೆ. ಇದೇನು ನನ್ನ ಇಷ್ಟದ ಬಣ್ಣವಾಗಿರ್ಲಿಲ್ಲ. ಅಪ್ಪಅಮ್ಮನ ಧೋರಣೆನೇ ಒಪ್ಪದೆ ಹೊರಬಿದ್ದೋಳಿಗೆ ನೀನೇನು ಕಡಿವಾಣ ಹಾಕೋದು? ಈ ಪುರುಷ ಮೇಲ್ಮೆ ಗೂಂಡಾಗಿರಿ ನನ್ನತ್ರ ಇಟ್ಕೋಬೇಡ' ವಗ್ಗರಣೆಯ ಸಾಸಿವೆಕಾಳಾಗಿ ಚಟಪಟ ಸಿಡಿದವಳು ಒರಟಾಗಿ ಬಾಗಿಲೆಳೆದು ಹೊರಬಿದ್ದಳು. ಬೆಳಿಗ್ಗೆಬೆಳಿಗ್ಗೆ ತನಗೀ ಅಧಿಕಪ್ರಸಂಗ ಯಾಕೆ ಬೇಕಿತ್ತು ಅನಿಸಿತು ಧನಂಜಯನಿಗೆ. ತನ್ನ ಇಷ್ಟದ ಬಣ್ಣವಾಗಿರ್ಲಿಲ್ಲ ಅಂದಿದ್ದು ಮುಖಭಂಗವಾಗಿತ್ತು. ಥತ್! ಒಟ್ಟಿನಲ್ಲಿ ಇದೆಲ್ಲಾ ತನಗೆ ಬೇಕಾಗಿತ್ತಾ? ಎಂಬ ವೈರಾಗ್ಯ ಆವರಿಸಿಕೊಂಡು ಹಿಂದೆಯೇ ರುಚಿಯಾದ ಊಟ, ಸಾಂಗತ್ಯದ ಸೆಳೆತ ಕನವರಿಸಿತು. ರಾತ್ರಿ, 'ಸಾರಿ ಕಣೇ, ನಂದು ಆ ಉದ್ದೇಶ ಆಗಿರ್ಲಿಲ್ಲ' ಅಂದ. 'ಹೋಗ್ಲಿ ಬಿಡು, ಆಫೀಸಿಗೆ ಹೊತ್ತಾದ ಕಿರಿಕಿರೀಲಿ ಜಾಸ್ತೀನೆ ಅಂದುಬಿಟ್ಟೆ. ಡ್ರೆಸ್ಸನ್ನ ಎಲ್ರು ಮೆಚ್ಚಿಕೊಂಡ್ರು' ಅಂದಳು.

★★★

ಅಪಾರ್ಟ್‌ಮೆಂಟಿಗೆ ಬಂದು ಸೇರೋಹೊತ್ತಿಗೆ ಒಂಬತ್ತಾಗಿ ಹೋಗಿತ್ತು. ವಾರಾಂತ್ಯದ ಜೊತೆ ಹಬ್ಬವೂ ಸೇರಿಕೊಂಡ ಮುಸ್ಸಂಜೆಯ ವಾಹನ ದಟ್ಟಣೆಯಿಂದ ನರಳುತ್ತಿದ್ದ ಹೆಬ್ಬಾಳ, ಲಾಲಬಾಗ್‌ರಸ್ತೆಗಳಲ್ಲಿ ಸರ್ಕಸ್ ಮಾಡುವ ಹಿಂಸೆ. ಸಾಲದ್ದಕ್ಕೆ ಓನರು ಬಾಡಿಗೆ ಬಗ್ಗೆ ಕರೆಮಾಡಿ ರಗಳೆ ಹಚ್ಚಿಬಿಟ್ಟ. ಅವನದೇನು ತಪ್ಪಿಲ್ಲ, ಹತ್ತರೊಳಗೆ ಕೊಡಬೇಕಿದ್ದ ಬಾಡಿಗೆಯನ್ನ ತಾರೀಕು ಇಪ್ಪತ್ತಾದರೂ ಬ್ಯಾಂಕಿಗೆ ಹಾಕದಿದ್ದರೆ ಬೆಂಗಳೂರಲ್ಲಿ ಯಾರು ತಾನೆ ಸುಮ್ಮನಿರುತ್ತಾರೆ? ಕರೆಂಟು ಹೋಗಿದ್ದಕ್ಕೆ ಜನರೇಟರಿನ ಡೀಸೆಲ್ ವಾಸನೆ ಬೇಸ್ಮೆಂಟಿನ ತುಂಬ ಇಡುಗಿತ್ತು. ಧನಂಜಯನ್ನ ಹತ್ತನೆ ಅಂತಸ್ತಿಗೆ ಎಳೆದು ಹಾಕಿದ ಲಿಫ್ಟು ವಾಪಸು ಹೋಯಿತು. ಎರಡೆರಡು ಸಾರಿ ಗಂಟೆಯಾದರೂ ಬಾಗಿಲು ತೆರೆಯದ್ದಕ್ಕೆ ಬ್ಯಾಗಿಂದ ಬೀಗದಕೈ ಹುಡುಕಿ ತೆಗೆದು ಒಳಸೇರಿದವನಿಗೆ ಕತ್ತಲೆಯೊಂದಿಗೆ ದಿನವಿಡೀ ಕಟ್ಟಿಹಾಕಿದ ಕಮಟು ಹವೆ ಅಮರಿಕೊಂಡಿತು. ಅಂದರೆ ಇವಳಿನ್ನೂ ಬಂದಿಲ್ಲ. ಸಾಧಾರಣ ಎಂಟಕ್ಕೆಲ್ಲ ಮನೆ ಸೇರುತ್ತಾಳಲ್ಲ? ತನ್ನ ಹಾಗೆ ಟ್ರಾಫಿಕ್ಕಿನ ಸುಳಿಯಲ್ಲಿ ಸಿಕ್ಕಿಕೊಂಡಳೊ ಅಂತ ಯೋಚಿಸುತ್ತ ಟಾಯ್ಲೆಟ್ಟಿಗೆ ಹೋದ. ಹಾಗೆ ತಾನೂ ಇಷ್ಟು ತಡವಾಗಲು ಟ್ರಾಫಿಕ್ಕೊಂದೆ ಕಾರಣವಲ್ಲ. ಮೊಮ್ಮಗನ್ನ ನೋಡಲು ಅಮೆರಿಕಕ್ಕೆ ಹೋಗುವ ಖುಷಿಗೆ ಸುಚಿತ್ರಾ ಅಡಿಗಾಸ್‌ನಲ್ಲಿ ತಾವು ನಾಲ್ಕಾರು ಜನಕ್ಕೆ ಕಾಫಿ ತಿಂಡಿ ಕೊಡಿಸಿದ್ದರು. ಅಲ್ಲಿ ಒಂದು ಗಂಟೆ ತಡವಾಗಿತ್ತು. ಫೋನು ಮಾಡಿ ವಲ್ಲರಿಗೆ ಇದನ್ನ ತಿಳಿಸಿದ್ದ. ಅವಳು 'ಸರಿ' ಅಂತ ಚುಟುಕಾಗಿ ಪ್ರತಿಕ್ರಿಯಿಸಿದ್ದಕ್ಕೆ ಸಣ್ಣಕೆ ಅಸಮಾಧಾನ ಸುಳಿದಿತ್ತು. ಸ್ವಲ್ಪ ಅಸೂಯೆಯಿಂದ ಯಾರು ಎತ್ತ? ಅಂತ ವಿಚಾರಿಸಿಕೊಳ್ಳಲಿ ಅಂತ ಆಶಿಸಿದ್ದನೇ ಅಂತ ಯೋಚಿಸುತ್ತ ಒದ್ದೆ ಟುವಾಲಿನೊಂದಿಗೆ ಹಾಲಿಗೆ ಬಂದವನಿಗೆ ಗಡಿಯಾರ ಹತ್ತುಗಂಟೆ ತೋರಿಸಿತು. ಸರಿ ಇವತ್ತು ತಾನೇ ಅಡುಗೆಗಿಟ್ಟರಾಯ್ತು, ವಲ್ಲರಿಗೂ ಒಂದು ಸರ್ಪರ್ಸ್ ಮತ್ತು ಬದಲಾವಣೆ ಅಂತ ಅಪರೂಪದ ಉಮೇದಿನಿಂದ ಕುಕ್ಕರು ತೆಗೆದ.

ಹತ್ತೂವರೆಯಾಯ್ತು. ಆಗಲೆ ಎರಡು ಸಾರಿ ಕಿಟಕಿ ಪರೆದ ಸರಿಸಿ ರಸ್ತೆಯನ್ನಳೆದಿದ್ದ. ಹನ್ನೊಂದೂ ದಾಟಿದಾಗ ಆತಂಕ ಸುರುವಾಯಿತು. ಅವಳ ಮೊಬೈಲಿಗೆ ಕರೆ ಮಾಡಿದ. ಸ್ವೀಕರಿಸಲಿಲ್ಲ. ಛೇ! ಏನಪ್ಪ ಇವಳು? ಒಂದು ಮೆಸೇಜಾದ್ರೂ ಕಳಿಸಬಾರದ ಫೋನು